# ನನಗೆ ಜೀವಿಸಲು ಒಂದೇ ವರ್ಷವಿದ್ದಿದ್ದರೆ?

*ಅನೇಕ ವ್ಯವಹಾರಗಳು ವರ್ಷದ ಮೊದಲನೆಯ ದಿನದಂದು ವಿವರಪಟ್ಟಿಯನ್ನು ಮಾಡಿಕೊಳ್ಳುತ್ತೇವೆ. ವೈಯಕ್ತಿಕ ವಿವರ ಪಟ್ಟಿಯನ್ನು ಮಾಡಿಕೊಳ್ಳಲು ಇದು ಅತ್ಯುತ್ತಮವಾದ ಸಮಯವಾಗಿದೆ. ಈ ಪಾಠವು ಪ್ರತಿಯೊಬ್ಬ ಕೇಳುಗನು ತನ್ನ ಜೀವನ ಕಡೆಗೆ ನಿಕಟವಾಗಿ ನೋಡಿಕೊಳ್ಳುವಂತೆ ಮಾಡಲು ರಚಿಸಲ್ಪಟ್ಟಿದೆ.*

ಇನ್ನೊಂದು ವರ್ಷವು ದಾಟಿ ಹೋಯಿತು. ಹನ್ನೆರಡು ಹೆಚ್ಚು ತಿಂಗಳುಗಳ ತಾಸು ಗ್ಲಾಸಿನ ಮುಖಾಂತರ ದಾಟಿಹೋದವು, ಮತ್ತು ಅವುಗಳನ್ನು ಎಂದಿಗೂ ಹಿಂದಿರುಗಿ ತರಲಾಗದು. ಈ ಕ್ಯಾಲಂಡರಿನ[1] ಮೇಲೆ ಪುಟಗಳನ್ನು ಹಿಂದಿರುಗಿ ಇಡುವುದು ಯಾವ ಒಳ್ಳೆಯದನ್ನೂ ಮಾಡಲಾರದು. ಇಲ್ಲವೇ ಗಡಿಯಾರದ ಕೈಗಳನ್ನು ಹಿಂದಿರುಗಿ ಇಡುವವದರಿಂದ ಯಾವುದನ್ನೂ ಸಾಧಿಸಲಿಕ್ಕಾಗದು. ಒಂದು ವರ್ಷವು ಎಂದೆಂದಿಗೂ ಹೊರಟು ಹೋಗಿದೆ ಮತ್ತು ಬದಲಾಯಿಸಲ್ಪಡಲಾರದು.

ಹಾಗಿದ್ದರೂ, ದೇವರು ಈಗ ನಮಗೆ ಒಂದು *ಹೊಸ* ವರ್ಷವನ್ನು ಕೊಟ್ಟಿದ್ದಾನೆ - ತನ್ನ ಸಮಯದ ಉಗ್ರಾಣದಿಂದ ಹೊಸದಾಗಿ ತಯಾರಿಸಿದ್ದನ್ನು ಕೊಟ್ಟಿದ್ದಾನೆ. ಅದು 365 ದಿನಗಳನ್ನೂ; 8,760 ತಾಸುಗಳನ್ನೂ; 525,600 ಸುವರ್ಣ ನಿಮಿಷಗಳನ್ನೂ ಒಳಗೊಂಡಿರುತ್ತದೆ. ಅದರೊಂದಿಗೆ ನಾವು ಏನು ಮಾಡುತ್ತೇವೆ?ಎಂಬುದು ಪ್ರಶ್ನೆ. ಒಂದು ಅರ್ಥದಲ್ಲಿ ದಾಟಿಹೋದ ವರ್ಷವು A.D. ಕರ್ತನಿಗೆ ಒಳಪಟ್ಟಿರುತ್ತದೆ. "A.D.," anno Domini ಅಂದರೆ "ನಮ್ಮ ಕರ್ತನ ವರ್ಷದಲ್ಲಿ" ಎಂದರ್ಥ. ಇನ್ನೊಂದು ಅರ್ಥದಲ್ಲಿ ವರ್ಷವು - ಉಪಯೋಗಿಸಲು ಇಲ್ಲವೇ ವ್ಯರ್ಥಮಾಡಲು ನಮ್ಮದಾಗಿರುತ್ತದೆ.

ಹೊಸ ವರ್ಷದ ಅಮೂಲ್ಯತೆಯನ್ನು ಪ್ರಭಾವಿತಗೊಳಿಸಲು, ನಾವು ಈ ಮುಖ್ಯ ಪ್ರಸ್ತಾಪವನ್ನು ಯೋಚಿಸಲು ಬಯಸುವೆವು: "ನನಗೆ ಜೀವಿಸಲು ಒಂದೇ ವರ್ಷ ಇದ್ದರೆ" "ನಿನ್ನ ವ್ಯವಹಾರಗಳನ್ನು ತೀರಿಸು; ನಿನಗೆ ಜೀವಿಸಲು ಒಂದೇ ವರ್ಷವಿರುವುದು" ಎಂದು ಒಬ್ಬ ವೈದ್ಯನು ಹೇಳಿದರೆ ಏನಾಗುವುದು? ಅದು ಸಂಭವಿಸಬಹುದು, ನೀನು ತಿಳಿದಿರುವಿ. "ನಾಳೆ ಎಂದು ಕೊಚ್ಚಿಕೊಳ್ಳಬೇಡ; ಒಂದು ದಿನದೊಳಗೇ ಏನಾಗುವುದೋ ನಿನಗೆ ತಿಳಿಯದು" (ಜ್ಞಾನೋಕ್ತಿ 27:1). "... ನಾಳೆ ಏನಾಗುವುದೋ ನಿಮಗೆ ತಿಳಿಯದು. ನಿಮ್ಮ ಜೀವಮಾನವು ಎಂಥದು? ನೀವು ಸ್ವಲ್ಪ ಹೊತ್ತು ಕಾಣಿಸಿಕೊಂಡು ಆಮೇಲೆ ಕಾಣದೆ ಹೋಗುವ ಹಬೆಯಂತಿರುತ್ತೀರಿ" (ಯಾಕೋಬ 4:13ಬಿ, 14). ಜೀವಿಸಲು ನಮಗೆ ಕೇವಲ ಅಲ್ಪಸಮಯವಿರುವುದು ಎಂಬುದನ್ನು ತಿಳಿಯುವುದು ನಮ್ಮ ಜೀವಿತಗಳಲ್ಲಿ ಬದಲಾವಣೆ ಮಾಡುವ ಸಾಧ್ಯತೆಯಿರುವದಿಲ್ಲವೋ?

ಮರಣವನ್ನು ಎದುರಿಸುವುದು ಕೆಲವು ಜನರನ್ನು ಹುಚ್ಚರಂತೆ - ವರ್ತಿಸುವಂತೆ ಮಾಡಿರುವುದು. ಉದಾಹರಣೆಯಾಗಿ, ಒಬ್ಬ ಸುಪ್ರಸಿದ್ಧ ಕೊಲೆಗಾರನಿಗೆ ಮರಣದಂಡನೆ ಆಯಿತು. ಅವನು ಅಂತ್ಯದ ವರೆಗೆ "ವಿರೋಧಿಸುವವನೂ ಮಾತಾಡದೇ ಇರುವವನೂ" ಆಗಿದ್ದನೆಂದು ವರ್ತಮಾನ ಪತ್ರಿಕೆಗಳು ಹೇಳಿದವು ಮರಣವು ಜನರನ್ನೂ ಹುಚ್ಚರಂತೆ

ವರ್ತಿಸಲು ಮಾಡುವ ಸಾಧ್ಯತೆಯ ಇನ್ನೊಂದು ಉದಾಹರಣೆಯು ಕ್ಯಾಲಿಫೋರ್ನಿಯದಲ್ಲಿಯ ವಿಂಚೆಸ್ಟರ ಹೌಸ್. ಅದನ್ನು ಕಟ್ಟಲು ಮಿಲಿಯ ಗಟ್ಟಲೆ ಡಾಲರುಗಳೂ, ಮೂವತ್ತಾರು ವರ್ಷಗಳ ಸಮಯವೂ ಬೇಕಾಯಿತು. ಅದರಲ್ಲಿ ನೂರಾರು ಕೋಣೆಗಳಿವೆ, ಅದರಲ್ಲಿ ಹೆಚ್ಚಾದವುಗಳು ಆಯದು ಮಾಡಿಕೊಂಡ ಕಟ್ಟಿಗೆಗಳಿಂದ ಮಾಡಲ್ಪಟ್ಟಿವೆ. ಈ ಆಶ್ಚರ್ಯ ಸಂಗತಿಯು ಶ್ರೀಮತಿ ಸಾರಾ ವಿಂಚೆಸ್ಟರ್ ಎಂಬಾಕೆಗೆ, ಆಕೆಯು ಕಟ್ಟುತ್ತಿರುವ ಸಮಯದ ವರೆಗೆ ಆಕೆಯು ಸಾಯುವದಿಲ್ಲ ಎಂದು ಒಬ್ಬ "ಭವಿಷ ಹೇಳುವವನು" ಹೇಳಿದ್ದರಿಂದ ನಡೆಯಿತು.

ಮರಣದ ವಾಸ್ತವಿಕತೆಯನ್ನು ಎದುರಿಸುವುದು ನಮ್ಮಲ್ಲಿ ಅನೇಕರು ನಮ್ಮ ಜೀವನಗಳ ಬಗ್ಗೆ ಗಂಭೀರವಾಗಿ ಯೋಚಿಸುವಂತೆ ಮತ್ತು ಅಗತ್ಯವಾದ ಬದಲಾವಣೆಗಳನ್ನು ಮಾಡುವಂತೆ ಕಾರಣವಾಗುವುದು. ಅರಸ ಹಿಜ್ಕೀಯನು ಮರಣಾಂತಿಕವಾದ ಅಸ್ವಸ್ಥತೆಯಲ್ಲಿದ್ದಾಗ, ಪ್ರವಾದಿ ಯೆಶಾಯನು ಅವನಿಗೆ, "ನಿನ್ನ ಮನೆಯ ವಿಷಯವಾಗಿ ವ್ಯವಸ್ಥೆಮಾಡು; ಯಾಕಂದರೆ ನೀನು ಉಳಿಯುವ ಹಾಗಿಲ್ಲ, ಸಾಯಬೇಕಾಗಿದೆ" ಎಂದು ಅವನಿಗೆ ಹೇಳಿದನು (2 ಅರಸುಗಳು 20:1ಬಿ). ಇದು ಪ್ರತಿಯೊಬ್ಬನಿಗೆ ಒಳ್ಳೆಯ ಬುದ್ಧಿವಾದವಾಗಿದೆ.

"ನಿನಗೆ ಜೀವಿಸಲು ಒಂದೇ ವರ್ಷವಿದೆ" ಎಂದು *ನನಗೆ* ಹೇಳಲ್ಪಟ್ಟರೆ ಏನಾಗುವುದು? ಈ ಪ್ರಶ್ನೆಯನ್ನು ಸಾಕಷ್ಟು ವಿಚಾರಿಸಿದ ನಂತರ, ನಾನು ಕೆಲವೊಂದು ತೀರ್ಮಾನಗಳಿಗೆ ಬಂದೆನು. ಅವುಗಳಲ್ಲಿ ಕೆಲವು ಹೀಗಿವೆ.

## ಅದು ನನಗೆ ಮೌಲ್ಯಗಳ ಒಂದು ಹೊಸ ಅರ್ಥವನ್ನು ಕೊಡುವುದು

ಮಹತ್ವದ್ದೆಂದು ತೋರುವಂಥ ಹೆಚ್ಚಾದದ್ದು ಈಗ ಮಹತ್ವವಿಲ್ಲದ್ದಾಗಿ ಹೋಗುವುದು. ಪ್ರೇಲಿತ ಬರಹಗಾರನ ಮಾತುಗಳಿಗೆ ಹೆಚ್ಚಿನ ಅರ್ಥವಿರುತ್ತದೆ: "ಲೋಕದಲ್ಲಿರುವ ಶರೀರದಾಶೆ ಕಣ್ಣಿನಾಶೆ ಬದುಕು ಬಾಳಿನಡಂಬ ಈ ಮೊದಲಾದವುಗಳೆಲ್ಲವು ತಂದೆಯಿಂದ ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ. ಲೋಕವೂ ಅದರ ಆಶೆಯೂ ಗತಿಸಿ ಹೋಗುತ್ತವೆ; ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು" (1 ಯೋಹಾನ 2:16, 17). ನನಗೆ, ಜಗತ್ತು ಒಂದು ಚಿಕ್ಕ ವರ್ಷದಲ್ಲಿ ದಾಟಿ ಹೋಗುತ್ತಲಿದೆ. ಹೀಗೆ, ಹಿಂದಿನ ವರ್ಷಗಳಲ್ಲಿದ್ದಂತೆ ಈಗ ಲೋಕದ ಆಕರ್ಷಣೆಗಳು ಇರುವದಿಲ್ಲ. ನನ್ನ ಪ್ರಾಥಮಿಕ ಚಿಂತನೆಯು "ಸದಾ ಕಾಲವೂ ಜೀವಿಸುವುದು."

ಈ ಗಮನವು ನಿಶ್ಚಯವಾಗಿಯೂ ನನ್ನ ನೋಟವನ್ನು ಬದಲಾಯಿಸುವುದು.

(1) *ಅಲ್ಪವಾದ ಸಂಗತಿಗಳ ಮೇಲೆ ನಾನು ಬಹಳ ತಾಳ್ಮೆಯಿಲ್ಲದವನಾಗುವದಿಲ್ಲ.* ನನಗೆ ಕೋಪ ತರಿಸುವ ಅಲ್ಪ ಸಂಗತಿಗಳು ಮಹತ್ವವಿಲ್ಲದ ಸಂಗತಿಗಳಾಗಿ ತೋರುವವು. ನಾನು ಹೆಚ್ಚು ತಾಳ್ಮೆಯುಳ್ಳವನೂ, ಅರ್ಥಮಾಡಿಕೊಳ್ಳುವವನೂ, ದಯೆಯುಳ್ಳವನೂ, ಪ್ರೀತಿಸುವವನೂ ಆಗಿರುವೆನು. ಮಾಡಲ್ಪಡದ ಮತ್ತು ಮಾತಾಡಲ್ಪಡದ ಕಾರ್ಯಗಳೂ ಪ್ರೀತಿಯ ಮಾತುಗಳೂ ವ್ಯಕ್ತಪಡಿಸಲ್ಪಡುವವು. ಯಾವುದೇ ರೀತಿಯ ಅವಘಡವು ನಿನ್ನನ್ನು ಚಲಿಸಲಾರದು.

(2) *ನಾನು ಜೀವನವನ್ನು ಹೆಚ್ಚಾಗಿ ಅನುಭವಿಸುವೆನು.* ನಾವು ಜೀವನವನ್ನು ಅನುಭವಿಸಬೇಕೆಂದು ದೇವರು ಉದ್ದೇಶಿಸುತ್ತಾನೆ. "ಕಡೇ ಮಾತೇನಂದರೆ ನನ್ನ ಸಹೋದರರೇ, ಕರ್ತನಲ್ಲಿ ಸಂತೋಷಪಡಿರಿ" (ಫಿಲಿಪ್ಪಿ 3:1ಎ) ಎಂದು ಹೇಳಿದನು.

"ಯಾವಾಗಲೂ ಕರ್ತನಲ್ಲಿ ಸಂತೋಷಿಸಿರಿ; ಸಂತೋಷಪಡಿರಿ ಎಂದು ತಿರಿಗಿ ಹೇಳುತ್ತೇನೆ!" (ಫಿಲಿಪ್ಪಿ 4:4) ಎಂದೂ ಅವನು ಬರೆದನು.

ನಮ್ಮಲ್ಲಿ ಅನೇಕರಿಗೆ ತಪ್ಪಾದ ಯಜಮಾನನಿರುತ್ತಾನೆ. ಈ ಜಗತ್ತು ಮತ್ತು ಅದರಲ್ಲಿರುವ ಎಲ್ಲವೂ ಮನುಷ್ಯನ ಸೇವೆ ಮಾಡುವ ಉದ್ದೇಶಕ್ಕಾಗಿರುವುದು - ಆದರೆ ಅನೇಕರು ಲೋಕಕ್ಕೆ ಸೇವಕರಾಗಿದ್ದಾರೆ, ಜೀವನ ಮಾಡಲು ಇಲ್ಲವೇ ಜೀವನವನ್ನು ಅನುಭವಿಸಲು ಸಮಯವಿಲ್ಲದಷ್ಟು ಜೀವಿಸುವದಕ್ಕಾಗಿ ಕಾರ್ಯದಿಂದ ತುಂಬಿದವರಾಗುತ್ತೇವೆ. ವರ್ಷಗಳು ನನ್ನ ಮುಂದೆ ಇವೆಯೆಂದು ಭಾವಿಸಿಕೊಂಡು ಜೀವನವನ್ನು ಅನುಭವಿಸಲು *ಸಮಯವನ್ನು* ಕಂಡು ಕೊಳ್ಳುವದೇ ಇಲ್ಲ: ಆದರೆ ಒಂದು ವರ್ಷ ಉಳಿದಿರುವದರೊಂದಿಗೆ, ಸಮಯವನ್ನು *ಮಾಡಿಕೊಳ್ಳುವೆನು.*

ಈ ಹೊಸ ನೋಟವು ಲೋಕದ ಬಗ್ಗೆ ಹೊಸ ದೃಷ್ಟಿಕೋನವನ್ನು ಕೊಡುವದಲ್ಲದೇ *ನನ್ನ ಬಗ್ಗೆ* ಹೊಸ ಮೌಲ್ಯಮಾಪನವನ್ನು ಕೊಡುವುದು. ನಾವಿಲ್ಲದೇ ಜೀವನವು ಮುಂದುವರಿಯಲಾರದು ಎಂದು ನಮ್ಮ ಆಂತರ್ಯದಲ್ಲಿ ಯೋಚಿಸುವದರಿಂದ, ನಮ್ಮಲ್ಲಿ ಕೆಲವರು ನಿಧಾನವುಳ್ಳವರಾಗುವದಿಲ್ಲ. ಈಗ ಒಂದು ವರ್ಷದಲ್ಲಿ, *ನಾನಿಲ್ಲದೇ* ಜೀವನವು ಹೋಗುವುದೆಂಬ ಸಂಗತಿಯನ್ನು ಎದುರಿಸಬೇಕಾಗುವುದು. ಹಾಗಾದರೆ, ಸಂಬಂಧಿಕವಾಗಿ ಮಹತ್ವವಿಲ್ಲದ್ದನ್ನು ಮಾಡುತ್ತ ನನ್ನನ್ನು ನಾನೇ ಯಾಕೆ ದಣಿಸಿಕೊಳ್ಳ ಬೇಕು? ನನಗೆ ಜೀವಿಸಲು ಒಂದೇ ಒಂದು ವರ್ಷವಿದ್ದರೆ, ನನ್ನ ಜೀವಿತವನ್ನು ಹೆಚ್ಚಾಗಿ ಅನುಭವಿಸಲು ಪ್ರಯತ್ನಿಸುವೆನು.

(3) *ನನ್ನ ಸಮಯವನ್ನು ಹೆಚ್ಚು ಬುದ್ಧಿವಂತಿಕೆಯಿಂದ ಉಪಯೋಗಿಸುವೆನು.* ನಮ್ಮಲ್ಲಿ ಹೆಚ್ಚಾದವರು ನಮಗೆ ತೀರದ ಸಂಗ್ರಹವಿದೆಯೇನೋ ಎಂಬಂತೆ ಸಮಯವನ್ನು ಕಳೆಯುತ್ತೇವೆ. ಸಮಯವು ಎಷ್ಟು ಅಮೂಲ್ಯವಾದದ್ದೆಂದು ನಾವು ಮೆಚ್ಚಿಕೊಳ್ಳು ವದಿಲ್ಲ. ಅಮೇರಿಕನ್ ರಾಜಕಾರಣಿ ಬೆನ್ ಫ್ರಾಂಕ್ಲಿನ್ ಹೀಗೆ ಹೇಳಿದನು, "ನೀನು ಜೀವವನ್ನು ಪ್ರೀತಿಸುವಿಯೋ? ಹಾಗಾದರೆ ಸಮಯವನ್ನು ವ್ಯರ್ಥವಾಗಿ ಕಳೆಯಬೇಡ; ಯಾಕಂದರೆ ಅದರಿಂದಲೇ ಜೀವನವು ಮಾಡಲ್ಪಟ್ಟಿದೆ."[2] "ಆದಕಾರಣ ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ. ಜ್ಞಾನವಿಲ್ಲದವರಾಗಿರದೆ ಜ್ಞಾನವಂತರಾಗಿರ್ರಿ. ಈ ದಿನಗಳು ಕೆಟ್ಟವುಗಳಾಗಿವೆ; ಆದುದರಿಂದ ಕಾಲವನ್ನು ಸುಮ್ಮನೆ ಕಳಕೊಳ್ಳದೆ[3] ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ" (ಎಫೆಸ 5:15, 16) ಎಂದು ಪೌಲನು ಹೇಳಿದನು.

ನಮಲ್ಲಿ ಅನೇಕರಿಗೆ ನಾವು ಪೂರ್ತಿಗೊಳಿಸಲು ಬಯಸುವ ಯೋಜ ನೆಗಳಿರುವವು, ಆದರೆ ಅವುಗಳಿಗಾಗಿ ಸಮಯವಿರುವದಿಲ್ಲ ಎಂದು ಹೇಳುವೆವು. ಸತ್ಯವು ತಿಳಿಯಲ್ಪಟ್ಟರೆ, ಅವುಗಳನ್ನು ಮಾಡಲು ಸಾಕಷ್ಟು ಸಮಯವನ್ನು ವ್ಯರ್ಥ ವಾಗಿ ಕಳೆದಿರುವೆವು. ವರ್ಷಗಳಿಂದ ಒಂದು ಪುಸ್ತಕ ಬರೆಯಲು ಕೆಲಸಮಾಡು ತ್ತಿದ್ದೇನೆ, ಆದರೆ ಅದನ್ನ ಮುಗಿಸಲು ನಾನು "ಸಮಯವನ್ನು ಕಂಡುಕೊ ಳ್ಳುತ್ತಿರುವದಿಲ್ಲ." ಇತ್ತೀಚೆಗೆ ತನ್ನ ಕ್ರಮಪ್ರಕಾರವಾದ ಕೆಲಸಕ್ಕೆ ವ್ಯತ್ಯಾಸಮಾಡದೇ ಇಪ್ಪತ್ತಕ್ಕಿಂತಲೂ ಹೆಚ್ಚು ಪುಸ್ತಕಗಳನ್ನು ಬರೆದ ಒಬ್ಬ ಮನುಷ್ಯನ ಬಗ್ಗೆ ಓದಿದೆನು - ಪ್ರತೀ ದಿನ ಸಾಮಾನ್ಯವಾಗಿದ್ದಕ್ಕಿಂತಲೂ ಒಂದು ತಾಸು ಮೊದಲು ಎದ್ದು, ಆ ತಾಸನ್ನು ಬರೆಯುವದರಲ್ಲಿ ಉಪಯೋಗಿಸಿದನು. ನಾವು ವ್ಯರ್ಥವಾಗಿ ಹಾಳು ಮಾಡಿಕೊಂಡ ಸಮಯದಲ್ಲಿ ಎಂಥಾ ಉದಾತ್ತವಾದ ಕಾರ್ಯಗಳಿಗೆ ಉಪಯೋಗಿಸಬಹುದಿತ್ತು! ಜೀವಿ ಸಲಿಕ್ಕೆ ಒಂದು ವರ್ಷ ಇರುವದರೊಂದಿಗೆ, ಪ್ರತಿಯೊಂದು ನಿಮಿಷವು ಪೂರ್ಣವಾಗಿ ಉಪಯೋಗಿಸಲ್ಪಡಲು ಒಂದು ಅಮೂಲ್ಯವಾದ ವರವಾಗಿರುವುದು.

ಎರಡು ಇಲ್ಲವೇ ಮೂರು ನಿಮಿಷಗಳು - ಎರಡು ಇಲ್ಲವೇ ಮೂರು ತಾಸುಗಳು;
ನಮ್ಮ ಈ ಜೀವನದಲ್ಲಿ ಅವುಗಳ ಅರ್ಥವೇನು?
ಬಹಳವೇನಲ್ಲ, ಸಮಯದಂತೆ ಲೆಕ್ಕಿಸಿದರೆ,
ಆದರೆ ನಿಮಿಷಗಳು ಬಂಗಾರ ಮತ್ತು ತಾಸುಗಳು ಶ್ರೇಷ್ಠ.
ಯಾವಾಗಲಾದರೊಮ್ಮೆ ನಾವು ಉಪಯೋಗಿಸಿದರೆ ಮಾತ್ರ
ಯಾರನ್ನಾದರೂ ಸಂತೋಷಪಡಿಸಲು, ಯಾರನ್ನಾದರೂ ಮುಗುಳ್ನಗುವಂತೆ
ಮಾಡಲು;
ಒಂದು ನಿಮಿಷವು ಚಿಕ್ಕ ಬಾಲಕನ ಕಣ್ಣೀರುಗಳನ್ನು ಬರೆಸಬಹುದು,
ಒಂದು ತಾಸು ವರ್ಷಗಳ ತೊಂದರೆಯನ್ನು ತೂರಿಬಿಡಬಹುದು.
ನನ್ನ ಸಮಯದ ನಿಮಿಷಗಳು ತರಬಹುದು ಅಂತ್ಯಕ್ಕೆ ಎಲ್ಲಿಯೋ ಇರುವ
ನಿರಾಶೆಯನ್ನು, ಮತ್ತು ಕೊಡುವುದು ನನಗೆ ಒಬ್ಬ ಸ್ನೇಹಿತನನ್ನು.[4]

(4) ಅತೀ ಮಹತ್ವದ್ದು, ನನ್ನ ನೂತನ ಮೌಲ್ಯಗಳು *ಆತ್ಮಿಕ ಸಂಗತಿಗಳನ್ನು ಮೊದಲಾಗಿ ಇಡುವದಕ್ಕೆ* ನನಗೆ ಸಹಾಯ ಮಾಡುವ, ಈ ಪ್ರಾಧಾನ್ಯತೆ ನಮಗಿರ ಬೇಕೆಂದು ದೇವರು ಯಾವಾಗಲೂ ಉದ್ದೇಶಿಸಿದ್ದಾನೆ (ಮತ್ತಾಯ 6:33), ಆದರೆ ಹೆಚ್ಚಾದ ಜನರು ದೇವರ ಯೋಜನೆಗಳಿಂದ ಮತ್ತು ಉದ್ದೇಶಗಳಿಂದ ಅಗಲಿಹೋಗಿದ್ದಾರೆ. ಪ್ರಾಪಂಚಿಕತೆಯ ತಾತ್ಕಾಲಿಕ ಸ್ವಭಾವದೊಂದಿಗೆ ಅಷ್ಟು ಪ್ರತ್ಯಕ್ಷವಾದದ್ದರೊಂದಿಗೆ, ನನ್ನ ಜೀವಿತವು ನಿತ್ಯವಾದವುಗಳ ಮೇಲೆ ಕೇಂದ್ರೀಕರಿಸುವುದು. ಇಂಥ ವಾಕ್ಯ ಭಾಗಗಳಿಗೆ ನನಗಾಗಿ ಹೊಸ ಅರ್ಥವಿರುವುದು: "ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು?" (ಮತ್ತಾಯ 16:26).

ನನಗೆ ಜೀವಿಸಲು ಒಂದೇ ಒಂದು ವರ್ಷವಿದ್ದರೆ, ನನ್ನ ದೃಷ್ಟಿಕೋನವು ನಿಶ್ಚಯ ವಾಗಿಯೂ ಬದಲಾಗುವುದು.

## ಹಿಂದಿನದನ್ನು ತೀರಿಸುವದಕ್ಕಾಗಿ ನಾನು ಪ್ರತಿಯೊಂದು ಪ್ರಯತ್ನಮಾಡುವೆನು

ಮರಣವನ್ನು ಎದುರಿಸುವುದು ಆತ್ಮಶೋಧನೆಯ ಕೆಲವು ಸ್ವಯಂ ಪರೀಕ್ಷೆಗಳಲ್ಲಿ ತೊಡಗಲು ನನ್ನನ್ನು ನಡಿಸುವುದು ಸ್ವಲ್ಪ ಸಮಯದಲ್ಲಿ ದೇವರ ಮುಂದೆ ನಿಂತು ಕೊಳ್ಳಲು ಮತ್ತು ಆತನು ನನಗೆ, "ನೀನು ಇಲ್ಲಿ ಯಾವುದನ್ನೋ ತಪ್ಪಿಸಿಕೊಂಡಿರುವಿ" ಎಂದು ಹೇಳುವದನ್ನು ಕೇಳಲು ಬಯಸುವದಿಲ್ಲ. "ನೀನು ಎಲ್ಲಿ ಇರುವಿ?" (ಆದಿಕಾಂಡ 3:9) ಎಂದು ಆದಾಮನಿಗೆ ದೇವರು ಕೇಳಿದ ಪ್ರಶ್ನೆಯನ್ನು ಯೋಚಿಸು. ಮೂರು ಹೇಳಿಕೆಗಳ ಮೇಲೆ ಕೇಂದ್ರೀಕರಿಸಿ ಒಬ್ಬ ಪ್ರಸಂಗಿಯು ಈ ಪಾಠ್ಯದ ಮೇಲೆ ಪ್ರಸಂಗ ಮಾಡಿದನು: (1) "ಪ್ರತಿಯೊಬ್ಬನು ಎಲ್ಲಿಯೋ ಇರುವನು," (2) "ಬಹಳ ಜನರು ಅವರಿರ ಬೇಕಾಗಿರದಂಥ ಸ್ಥಳದಲ್ಲಿ ಇರುವರು," ಮತ್ತು (3) "ಅಲ್ಲಿ ಅವರು ಇರಬಾರದಂಥವರು ಅವರು ಇರಲು ಬಯಸದೇ ಇರುವ ಸ್ಥಳಕ್ಕೆ ಹೋಗುತ್ತಿರುವರು!" ನಾನು ಆತ್ಮಿಕವಾಗಿ *ಎಲ್ಲಿ ಇರಬೇಕು* ಎಂಬುದು ನನಗೆ ಬಹಳ ಮಹತ್ವದ್ದಾಗುತ್ತದೆ.

ಜೀವಿಸಲಿಕ್ಕೆ ಕೇವಲ ಒಂದು ವರ್ಷವಿರುವದರೊಂದಿಗೆ, ನನಗೆ ವೈರಿಗಳಿರುವದನ್ನು ನಾನು ಸಹಿಸಿಕೊಳ್ಳುವದಿಲ್ಲ. *ನನ್ನ ಜೊತೆ ಮನುಷ್ಯನೊಂದಿಗೆ* ನನ್ನ ಹಿಂದಿನ ಸಮಸ್ಯೆ ಗಳನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸುವೆನು. "... ಮೊದಲು ನಿನ್ನ ಸಹೋದರನ ಸಂಗಡ ಒಂದಾಗು; ..." (ಮತ್ತಾಯ 5:24) ಎಂದು ಕ್ರಿಸ್ತನು ಹೇಳಿದನು. "ನಾನು

ತಪ್ಪು ಮಾಡಿದ್ದೇನೆ. ನನ್ನನ್ನು ಕ್ಷಮಿಸುವಿಯೋ?" ಎಂದು ಹೇಳುವದರಿಂದ ನನ್ನ ಗರ್ವವಾಗಲೀ ಇಲ್ಲವೇ ಸ್ವರ್ಥತೆಯು ತಡೆಹಿಡಿಯುವದಿಲ್ಲ. ಇದಲ್ಲದೆ ಕರ್ತನ ಕ್ಷಮಾಪಣೆಯನ್ನು ಬಯಸುವ ನಾನು ಇತರರ ಮೇಲೆ ವಿರೋಧ ಸಾಧಿಸಲಾರೆನು (ಮತ್ತಾಯ 6:14, 15).

ಆಗ ನಾನು *ದೇವರೊಂದಿಗೆ* ಹಿಂದಿನದನ್ನ ಸರಿಪಡಿಸಿಕೊಳ್ಳಲು ಬಯಸುವೆನು. ಸತ್ಯವನ್ನು ಎದುರಿಸೋಣ: ನಾವು ಏನು ಮಾಡಬೇಕೆಂಬುದನ್ನು ತಿಳಿಯುವದರಲ್ಲಿ ನಾವೆಲ್ಲರೂ ಬಿದ್ದು ಹೋಗಿದ್ದೇವೆ. ತಿಂಗಳಿನಲ್ಲಿ ಒಂದು ಸಲ ಪ್ರಸಂಗಿಸುವಿಕೆ ಇದ್ದ ಒಂದು ಸಭೆಯ ಬಗ್ಗೆ ನಾನು ಕೇಳಿದ್ದೇನೆ. ಹೆಚ್ಚು ಸಲ ಯಾಕೆ ಇಲ್ಲ ಎಂದು ನಾನು ಕೇಳಿದ್ದಕ್ಕೆ, ಒಬ್ಬ ಸದಸ್ಯನು, "ಅದು ಯಾವುದೋ ಒಳ್ಳೆಯದನ್ನು ಮಾಡುವದಿಲ್ಲ; ನಾವು ಮಾಡುತ್ತಿರುವದಕ್ಕಿಂತಲೂ ಹೆಚ್ಚಾದದ್ದನ್ನು ನಾವು ಈಗ ತಿಳಿದುಕೊಂಡಿದ್ದೇವೆ" ಎಂದು ಉತ್ತರ ಕೊಟ್ಟನು. ಅವರಲ್ಲಿ ಪ್ರಸಂಗದ ಬಗ್ಗೆ ತಪ್ಪು ಭಾವಣೆಯಿತ್ತು - ಅದು ಪ್ರಬೋದ ನಾಕಾರಿಯಾಗಿರಬಹುದಿತ್ತು - ಆದರೆ ಅವರ ಹೇಳಿಕೆಯು ನಮ್ಮಲ್ಲಿ ಹೆಚ್ಚಾದವರ ಬಗ್ಗೆ ಸತ್ಯವಾದದ್ದಾಗಿದೆ. ನಾವೆಲ್ಲರೂ ನಾವು ಮಾಡುವದಕ್ಕಿಂತಲೂ ಹೆಚ್ಚಾದದ್ದನ್ನು ತಿಳಿದಿದ್ದೇವೆ. ಬೈಬಲ್ ಅದನ್ನು "ಪಾಪ" ಎಂದು ಕರೆಯುತ್ತದೆ: "ಆದುದದರಿಂದ ಒಳ್ಳೇದನ್ನು ಮಾಡಬೇಕೆಂದು ತಿಳಿದು ಅದನ್ನು ಮಾಡದೆ ಇರುವವನು ಪಾಪಕ್ಕೊಳ ಗಾಗಿದ್ದಾನೆ" (ಯಾಕೋಬ 4:17).

ನನಗಾಗಲೀ ಇಲ್ಲವೇ ಇತರರಿಗಾಗಲಿ ಪಾಪವು ಎಷ್ಟೋ ಚಿಕ್ಕದ್ದಾಗಿ ತೋರಿದರೂ, ಸರಿಪಡಿಸಿಕೊಳ್ಳಲಿಕ್ಕಾಗುವಂತೆ, ನನ್ನ ಲೆಕ್ಕಾಚಾರ ಮಾಡಿಕೊಂಡು ನಾನು ಎಲ್ಲಿ "ಗುರಿ ತಪ್ಪಿಸಿಕೊಂಡಿದ್ದೇನೆ"[5] ಎಂಬುದನ್ನ ನೋಡುವೆನು. ಒಂದು ಚಿಕ್ಕ ಕೆಂಪುಕಲೆಯು ಬಹಳವಾಗಿ ಬೆಳೆದು ಅಂಟುರೋಗವನ್ನು ಸೂಚಿಸಬಹುದು. ಚಿಕ್ಕಗೆದ್ದಲು ಹುಳಗಳು ಒಂದು ಮನೆಯನ್ನು ಹಾಳುಮಾಡಬಹುದು. ಮನುಷ್ಯನ ಜೀವನದಲ್ಲಿಯ "ಅಲ್ಪ ಹುಚ್ಚುತನವು" ಸುಗಂಧ ತೈಲದಲ್ಲಿಯ ಸತ್ತ ನೊಣಗಳಂತಿರುವುದು (ಪ್ರಸಂಗಿ 10:1): ಅವನು ಮಾಡಿರಬಹುದಾದ ಒಳ್ಳೆಯದನ್ನು ಅದು ರದ್ದುಗೊಳಿಸುವುದು. ನನ್ನ ಕಾರ್ಯವು ನನ್ನ ಜೀವಿತವನ್ನು ಪರಿಶುದ್ಧ ಬರಹಗಳಿಗೆ ಹೋಲಿಸುವದರಿಂದ ನಾನು ಎಲ್ಲಿ ಸೋತು ಹೋಗಿದ್ದೇನೆ ಎಂಬುದನ್ನು ಕಂಡುಕೊಳ್ಳುವುದು - "ದೊಡ್ಡದು" ಇರಲಿ ಇಲ್ಲವೇ "ಸಣ್ಣದು" ಇರಲಿ ಎಲ್ಲಾ ಪಾಪಗಳನ್ನು ಬಹಿರಂಗಪಡಿಸುವುದು ಆಗಿದೆ.

ನನ್ನ ಜೀವಿತದಲ್ಲಿ ಪಾಪವನ್ನು ಹುಡುಕಿ ಕಂಡುಕೊಂಡಮೇಲೆ - ಮತ್ತು ಒಪ್ಪಿಕೊಂಡ ಮೇಲೆ - ಆ ಮೇಲೆ ಏನು ಮಾಡಬೇಕೆಂಬುದನ್ನು ತಿಳಿದುಕೊಳ್ಳುವೆನು. ಒಬ್ಬ ಕ್ರೈಸ್ತನಲ್ಲದವನು ತನ್ನ ಪಾಪಗಳನ್ನು ಅರಿಕೆಮಾಡುವ, ಪ್ರಾಯಶ್ಚಿತ್ತ ಯಜ್ಞವಾಗಿ ತನ್ನ ಪಾಪಗಳನ್ನು ಅರಿಕೆ ಮಾಡುವ ಯಜ್ಞವಾಗಿ ತನ್ನ ವಿಶ್ವಾಸವನ್ನು ಯೇಸುವಿನಲ್ಲಿ ಇಡುವ, ಮತ್ತು ಆತನ ಮರಣದಲ್ಲಿ ಬಾಪ್ತಿಸ್ಮ[6] ಮಾಡಿಸಿಕೊಳ್ಳುವ ಅಗತ್ಯತೆಯಿರುತ್ತದೆ (ಅಪೊಸ್ತಲರ ಕೃತ್ಯಗಳು 2:36-38; ರೋಮಾಪುರ 6:3-6). ಹೀಗಿದ್ದರೂ, ನಾನು ದೇವರ ಮಗುವಾಗಿದ್ದರಿಂದ, ನನಗಾಗಿ ಕ್ಷಮಾಪಣೆಯ ಭಿನ್ನವಾದ ನಿಯಮವಿರುವುದು: ನನ್ನ ಪಾಪಗಳು ನನಗೆ ಮತ್ತು ದೇವರಿಗೆ ಮಾತ್ರ ತಿಳಿಯಲ್ಪಟ್ಟಿದ್ದರೆ, ಆಗ ಅವುಗಳ ಬಗ್ಗೆ ದೇವರೊಂದಿಗೆ ಮಾತ್ರ ಬಗೆ ಹರಿಸಿಕೊಳ್ಳುವೆನು ತಪ್ಪು ಮಾಡುವ ಒಬ್ಬ ಕ್ರೈಸ್ತನಿಗೆ ಪೇತ್ರನು, "ಆದದರಿಂದ ಈ ನಿನ್ನ ಕೆಟ್ಟತನವನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಂಡು ಕರ್ತನು ನಿನ್ನ ಮನಸ್ಸಿನ ಆಲೋಚನೆಯನ್ನು ಕ್ಷಮಿಸುವನೋ ಏನೋ ಆತನನ್ನು ಬೇಡಿಕೋ" (ಅಪೊಸ್ತಲರ ಕೃತ್ಯಗಳು 8:22) ಎಂದು ಹೇಳಿದನು. ನನ್ನ ಪಾಪಗಳನ್ನು ಇತರರು ತಿಳಿದುಕೊಂಡಿದ್ದರೆ, ಆಗ ನನ್ನ ಪ್ರಾಭಾವವನ್ನು ಯೋಚಿಸಿ ಅವರ ಪ್ರಾರ್ಥನೆ

ಮತ್ತು ಕ್ಷಮಾಪಣೆಗಾಗಿ ಕೇಳಿಕೊಳ್ಳುವೆನು. “ಹೀಗಿರಲು ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ ...” (ಯಾಕೋಬ 5:16) ಎಂದು ಯಾಕೋಬನು ಹೇಳಿದನು.

ನಾನು ತಿಳಿದು ಕೊಂಡ ಪಾಪಗಳ ಬಗ್ಗೆ ಕಾರ್ಯ ತೆಗೆದುಕೊಂಡ ನಂತರ, ನಾನು ಮೊಣಕಾಲುಗಳನ್ನೂರಿಕೊಂಡು ನಾನು ತಿಳಿಯದೇ ಇರುವಂಥ ಪಾಪಗಳನ್ನು ಕುರಿತು ದಾವೀದನಂತೆ ಹೀಗೆ ಪ್ರಾರ್ಥನೆ ಮಾಡುವೆನು: “ತನ್ನ ತಪ್ಪುಗಳನ್ನೆಲ್ಲಾ ತಿಳಿದುಕೊಳ್ಳುವವನು ಯಾವನು? ಮರೆಯಾದವುಗಳಿಂದ ನನ್ನನ್ನು ನಿರ್ಮಲಮಾಡು” (ಕೀರ್ತನೆ 19:12). ನಾನು ತಿದ್ದಿಕೊಳ್ಳಲಿಕ್ಕಾಗುವಂತೆ - ಅಂಥ ತಪ್ಪುಗಳನ್ನು ಕಂಡುಕೊಳ್ಳುವಂತೆ ನನಗೆ ಸಹಾಯ ಮಾಡಲು ದೇವರಿಗೆ ನನ್ನ ಪ್ರಾರ್ಥನೆಯಿರುವುದು.

ನನಗೆ ಜೀವಿಸಲು ಒಂದೇ ಒಂದು ವರ್ಷವಿದ್ದರೆ, ನನ್ನ ಹಿಂದಿನದೆಲ್ಲವನ್ನೂ ಸರಿಪಡಿಸಿಕೊಳ್ಳಲು ಪ್ರತಿಯೊಂದು ಪ್ರಯತ್ನ ಮಾಡುವೆನು.

## ಭವಿಷ್ಯಕ್ಕಾಗಿ ಒದಗಿಸಲು ನಾನು ಅತ್ಯುತ್ತಮವಾದದ್ದನ್ನು ಮಾಡುವೆನು

ಅನಂತರ, “ನಾನು ಈ ಜೀವನ ಬಿಟ್ಟು ಹೋಗುವ ಮೊದಲು ಯಾವ ಜವಾಬ್ದಾರಿಕೆಗಳು ಒದಗಿಸಲ್ಪಡತಕ್ಕದ್ದು?” ಎಂದು ನನ್ನನ್ನು ನಾನೇ ಕೇಳಿಕೊಳ್ಳುವೆನು. ನನ್ನ ಮೊದಲ ವಿಚಾರವು ನನ್ನ ಕುಟುಂಬಕ್ಕಾಗಿರುವುದು: ನನಗೆ ಸಾಧ್ಯವಾದ ಮಟ್ಟಿಗೆ ಅವರ ಶಾರೀರಕ ಕ್ಷೇಮಕ್ಕಾಗಿ ಭರವಸೆ ಕೊಡುವೆನು. “ಯಾವನಾದರೂ ಸ್ವಂತ ಜನರನ್ನು, ವಿಶೇಷವಾಗಿ ತನ್ನ ಮನೆಯವರನ್ನು ಸಂರಕ್ಷಿಸದೆ ಹೋದರೆ ಅವನು ಕ್ರಿಸ್ತನಂಬಿಕೆಯನ್ನು ತಿರಸ್ಕರಿಸಿದವನೂ ನಂಬದವನಿಗಿಂತ - ಕಡೆಯಾದವನೂ ಆಗಿದ್ದಾನೆ” (1 ತಿಮೊಥೆ 5:8). ಹೀಗಿದ್ದರೂ, ಅವರ ಆತ್ಮಿಕ ಕ್ಷೇಮ ನನ್ನ ಮೊದಲ ಚಿಂತನೆಯಾಗಿರುವುದು. “ನಡೆಯಬೇಕಾದ ಮಾರ್ಗಕ್ಕೆ ತಕ್ಕಂತೆ ಹುಡುಗನನ್ನು ಶಿಕ್ಷಿಸು; ಮುಪ್ಪಿನಲ್ಲಿಯೂ ಓರೆಯಾಗನು” (ಜ್ಞಾನೋಕ್ತಿ 22:6) ಎಂದು ಜ್ಞಾನಿಯು ಹೇಳಿದನು. ಹಿಂದೆ ನಾನು ತರಬೇತುಗೊಳಿಸುವಲ್ಲಿ ಸೋತು ಹೋದದ್ದಕ್ಕಾಗಿ ದುಃಖಪಡುವೆನು - ಬರುವ ವರ್ಷದಲ್ಲಿ ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸುವೆನು.

ತಂದೆತಾಯಿಗಳಿಗೆ ಮೋಶೆಯು ಕೊಟ್ಟ ನಿರ್ದೇಶನಗಳನ್ನು ಕೈಕೊಳ್ಳುವದರಲ್ಲಿ ಪ್ರಯತ್ನಿಸಲು, ನಾನು ಕುಳಿತಿರುವಾಗ, ನಡೆಯುವಾಗ, ಮಲಗಿರುವಾಗ ಮತ್ತು ಏಳುವಾಗ ಕರ್ತನ ಮಾರ್ಗಗಳನ್ನು ನನ್ನ ಮಕ್ಕಳಿಗೆ ಬೋಧಿಸುವೆನು (ಧರ್ಮೋಪದೇಶ ಕಾಂಡ 6:7). ಉಳಿದಿರುವ ಅಲ್ಪ ಸಮಯದಲ್ಲಿ ನನ್ನ ಗುರಿಯು ಭವಿಷ್ಯದಲ್ಲಿ ಕ್ರಿಸ್ತನಿಗೆ ಅವರ ನಂಬಿಗಸ್ತಿಕೆಯ ಭರವಸೆ ಕೊಡುವುದಾಗಿದೆ. ನನ್ನ ಮಕ್ಕಳೊಂದಿಗೆ ಅಧ್ಯಯನ ಮಾಡುವೆನು ಮತ್ತು ಆರಾಧಿಸುವೆನು ಮತ್ತು ಬೈಬಲ್ ಕ್ಲಾಸುಗಳಲ್ಲಿ ಹಾಜರಿರುವಂತೆ ನೋಡಿಕೊಳ್ಳುವೆನು;[7] “ಅವರು ಹೋಗಬೇಕಾದ ಮಾರ್ಗದಲ್ಲಿ” ಅವರನ್ನು ತರಬೇತುಗೊಳಿಸಲು ನಾನು ಮಾಡಬೇಕಾದದ್ದೆಲ್ಲವನ್ನೂ ಮಾಡುವೆನು.

ಸಾಧ್ಯವಾದರೆ, ಕ್ರೈಸ್ತ ಶಿಕ್ಷಣದ ಮುಖಾಂತರ ಅವರು ಭವಿಷ್ಯದ ತರಬೇತಿಗಾಗಿ ಒದಗಿಸುವೆನು[8] ಕ್ರೈಸ್ತ ಶಿಕ್ಷಕರು, ಜೊತೆಗಾರರು ಮತ್ತು ಕ್ರೈಸ್ತ ವಾತಾವರಣ ಇರುವ ಕ್ರೈಸ್ತ ಶಾಲೆಯು ಅವರಿಗೆ ಕ್ರೈಸ್ತ ತರಬೇತಿಯಲ್ಲಿ ಮುಂದುವರಿಯುದಕ್ಕೆ ಅತ್ಯುತ್ತಮ ಸ್ಥಳಗಳಲ್ಲಿ ಒಂದಾಗಿರುತ್ತದೆ.

ಆಗ, ನನ್ನ ಜಾವಾಬ್ದಾರಿಕೆಗಳನ್ನು ಯೋಚಿಸುವಲ್ಲಿ, ಸಾಮಾನ್ಯವಾಗಿ ಕರ್ತನ ಕಾರ್ಯವನ್ನು ಯೋಚಿಸುವೆನು. ಪೌಲನ ಮಾತುಗಳು ನನಗೆ ಅನ್ವಯವಾಗುತ್ತವೆ:

> ... ಶರೀರದಲ್ಲಿಯೇ ಬದುಕಬೇಕಾದಲ್ಲಿ ಕೆಲಸಮಾಡಿ ಫಲಹೊಂದಲು ನನಗೆ ಅನುಕೂಲವಾಗುವದು. ಹೀಗಿರಲಾಗಿ ನಾನು ಯಾವದನ್ನಾರಿಸಿಕೊಳ್ಳ ಬೇಕೋ ನನಗೆ ತೋರದು. ಈ ಎರಡರ ನಡುವೆ ಸಿಕ್ಕಿಕೊಂಡಿದ್ದೇನೆ; ಇಲ್ಲಿಂದ ಹೋಗಿಬಿಟ್ಟು ಕ್ರಿಸ್ತನ ಜೊತೆಯಲ್ಲಿರಬೇಕೆಂಬುದೇ ನನ್ನ ಅಭಿಲಾಷೆ, ಅದು ಉತ್ತಮೋತ್ತಮ; ಆದರೆ ನಾನಿನ್ನೂ ಶರೀರದಲ್ಲಿ ವಾಸಮಾಡಿಕೊಂಡಿರುವದೇ ನಿಮಗೋಸ್ಕರ ಬಹು ಅವಶ್ಯವಾದದ್ದು (ಫಿಲಿಪ್ಪಿ 1:22-24).

ಹಿಂದಿನದನ್ನು ಪೂರ್ತಿಗೊಳಿಸಿದ ನಂತರ, ನನ್ನ ಹೋಗುವಿಕೆಯು ನನಗೆ ಲಾಭದಾಯಕವಾಗಿರುವುದು - ಆದರೆ ಅದು ನನ್ನ ಕರ್ತನಿಗಾಗಿ ನನ್ನ ಸೇವೆಯ ಅಂತ್ಯ ವಾಗುವುದು. ಕ್ರಿಸ್ತನ ಕಾರಣಕ್ಕಾಗಿ ಇದು ಒಳ್ಳೆಯದಾಗಿರುವದಿಲ್ಲ. ನನ್ನ ಮೃತ್ಯು ಪತ್ರದಲ್ಲಿ ಕರ್ತನ ಕಾರ್ಯವನ್ನು ಜ್ಞಾಪಿಸಿಕೊಳ್ಳುವದರಿಂದ, ಅದು ಮುಂದುವರಿಯುವಂತೆ ನಾನು ಸಹಾಯ ಮಾಡಬಹುದು.[9]

ಕರ್ತನ ಕಾರ್ಯಕ್ಕಾಗಿ ಒದಗಿಸುವದಕ್ಕೆ ಅತ್ಯುತ್ತಮ ಮಾರ್ಗಗಳಲ್ಲಿ ಒಂದು, ನನ್ನ ಸ್ಥಳದಲ್ಲಿ ಕರ್ತನ ಕಾರ್ಯವನ್ನು ಮುಂದರಿಸುವ ಆತ್ಮಗಳನ್ನು ರಕ್ಷಿಸುವುದು. ನನ್ನ ಉಳಿದ ವರ್ಷದಲ್ಲಿ ಕ್ರಿಸ್ತನಿಗೆ ಒಂದು ಆತ್ಮವನ್ನು ನಡಿಸಲು ಬಹಳ ಕಷ್ಟಪಡಲು ಪ್ರಯತ್ನಿಸುವೆನು. ತನ್ನ ವಾಕ್ಯವು ತನಗೆ ವ್ಯರ್ಥವಾಗಿ ಹಿಂದಿರುಗಿ ಬರುವದಿಲ್ಲ ಎಂದು ದೇವರು ಹೇಳಿದ್ದಾನೆ (ಯೆಶಾಯ 55:11; KJV) ಮತ್ತು ಬಾಪ್ತಿಸ್ಮವು ಬೋಧನೆಯ ಸ್ವಾಭಾವಿಕ ಪರಿಣಾಮವಾ ಗಿದೆ (ಮತ್ತಾಯ 28:19; KJV). ಇದಲ್ಲದೇ, ಹುಡುಕುವವರಿಗಾಗಿ ಆತನು ಅವಕಾಶದ "ತೆರೆದ ಬಾಗಿಲುಗಳನ್ನು" ಕೊಡುವನೆಂದು ತೋರಿಸಿದ್ದಾನೆ (1 ಕೊರಿಂಥ 16:9). ಒಂದು ವರ್ಷದಲ್ಲಿ ಒಬ್ಬನು ಒಂದು ಆತ್ಮವನ್ನು ನಿಜವಾಗಿಯೂ ರಕ್ಷಿಸಲು ಬಯಸಿದರೆ, ದೇವರು ಅವನಿಗೆ ಅವಕಾಶವನ್ನು ಕೊಡುವೆನೆಂದು ನಾನು ನಂಬುತ್ತೇನೆ.

ಆತ್ಮ ರಕ್ಷಿಸುವ ಈ ಪ್ರಯತ್ನವು ಜಗತ್ತಿನ ಕ್ಷೇಮಕ್ಕಾಗಿ ನಾನು ಮಾಡುವ ಅತೀ ದೊಡ್ಡ ಕೊಡುಗೆಯಾಗಿರುತ್ತದೆ. ಅನೇಕರು ತಾವು ಮರೆಯಲ್ಪಡಬಾರದೆಂದು, ತಮ್ಮ ಅಂತಿಮ ದಿನಗಳನ್ನು ಸ್ಮಾರಕಗಳನ್ನು ಕಟ್ಟುವದರಲ್ಲಿ ಕಳೆಯುತ್ತಾರೆ. ಪಿರ್ಯಾಮಿಡ್ದುಗಳು ಅರಸರ ಸಮಾಧಿಗಳಲ್ಲದೇ ಬೇರೆ ಏನೋ ಆಗಿರುವವು? ಇಂದು ನಾವು ಪಿರ್ಯಾಮಿಡ್‌ಗಳ ಬಹಳವಾದದ್ದನ್ನು ಮತ್ತು ಅರಸುಗಳ ಬಗ್ಗೆ ಅಲ್ಪವಾದದ್ದನ್ನು ತಿಳಿದಿರುತ್ತೇವೆ. ಭೂಲೋಕದ ಸ್ಮಾರಕಗಳು ತಮ್ಮ ಅರ್ಥವನ್ನು ಕಳೆದುಕೊಳ್ಳುತ್ತವೆ. ನಾವು ಒಂದು ಆತ್ಮವನ್ನು ರಕ್ಷಿಸುವಂತೆ, ನಾವು ಮುಗಿಯದ ಸಜೀವ ಸ್ಮಾರಕವನ್ನು ಪ್ರಾರಂಭಿಸುತ್ತೇವೆ. ಆ ಆತ್ಮಕ್ಕೆ ಇತರರ ಮೇಲೆ ಪ್ರಭಾವವಿರುವುದು, ಅವರಿಗೆ ಇನ್ನೂ ಇತರರ ಮೇಲೆ ಪ್ರಭಾವವಿರುವುದು. ಹೀಗೆ ಪುನಃ ಪುನಃ ವಿಮೋಚನೆಯು ಸತತವಾಗಿ ಮುಂದುವರಿಯುವುದು.

ನನಗೆ ಜೀವಿಸಲು ಒಂದೇ ವರ್ಷವಿದ್ದರೆ, ಕರ್ತನ ಕಾರಣದ ಭವಿಷತ್ತಿಗಾಗಿ ಮತ್ತು ನನ್ನ ಸ್ವಂತ ಭವಿಷಕ್ಕಾಗಿ ಒದಗಿಸಲು ಬಯಸುತ್ತೇನೆ.

## ನನ್ನ ಆತ್ಮಿಕ ಜೀವನವನ್ನು ಅಭಿವೃದ್ಧಿಗೊಳಿಸುವೆನು

ಕೇವಲ ಒಂದು ವರ್ಷದಲ್ಲಿ, ನನ್ನ ಪ್ರಾಣವು ಆತ್ಮನಾಗಿರುವ, ದೇವರ ಸನ್ನಿಧಿಯೊಳಗೆ ದಾಟಿ ಹೋಗುವುದು (ಯೋಹಾನ 4:24). ಆತನ ಸನ್ನಿಧಿಯಲ್ಲಿ, ಆತ್ಮಿಕವಾದವುಗಳಿಗೆ ಮಾತ್ರ ವಾಸ್ತವಿಕತೆ ಇರುವುದು. ಆ ದೈವಿಕ ಎದರಿಸುವಿಕೆಗೆ ಸಿದ್ಧನಾಗಲು, ನಾನು ನನ್ನ ಆತ್ಮಿಕ ಜೀವಿತವನ್ನು ವೃದ್ಧಿಗೊಳಿಸಬೇಕು.

ಆತ್ಮಿಕ ಬೆಳವಣಿಗೆಗಾಗಿ ನನಗೆ ಎರಡು ಮಾರ್ಗಗಳು ತೆರೆದಿರುವವು. ಮೊದಲನೆಯದು ಹೆಚ್ಚು ಬಹಿರಂಗವಾದದ್ದಾಗಿದ್ದು, ದೇಹದ ಅಂದರೆ ಸಭೆಯ ಜೀವನಕ್ಕೆ ಸಂಬಂಧಿಸಿದೆ (ಎಫೆಸ 1:22, 23). ಸಭೆಯ ಎಲ್ಲಾ ಆರಾಧನೆಗಳಲ್ಲಿ ಭಾಗವಹಿಸಲು ಪ್ರಯತ್ನಿಸುತ್ತೇನೆ, ಯಾಕಂದರೆ ನಾನು ಹಾಗೆ ಮಾಡಬೇಕೆಂದು ದೇವರು ಬಯಸುತ್ತಾನೆ (ಇಬ್ರಿಯ 10:25) ಮತ್ತು ಆ ಆರಾಧನೆಗಳು ನನ್ನನ್ನು ಆತ್ಮಿಕವಾಗಿ ಬಲಪಡಿಸುತ್ತವೆ. ಸಭೆಯ ಕೆಲಸದಲ್ಲಿ ನಾನು ಕಾರ್ಯನಿರತ ಭಾಗವಹಿಸುತ್ತೇನೆ. ಹಿಂದಿನ ದಿನಗಳಲ್ಲಿ ಹೆಚ್ಚು ಮಾಡಲು ನನ್ನ ವರಗಳನ್ನೂ ಸಾಮರ್ಥ್ಯಗಳನ್ನೂ ನಾನು ಬೆಳೆಸಿಕೊಳ್ಳದೇ ಇದ್ದದ್ದಕ್ಕಾಗಿ ದುಃಖಪಡಿಸುತ್ತೇನೆ. "ಭಲಾ ನಂಬಿಗಸ್ತನಾದ ಒಳ್ಳೇ ಆಳು ನೀನು; ಚೆನ್ನಾಗಿ ಮಾಡಿದ್ದೀ" (ಮತ್ತಾಯ 25:21ಎ; KJV) ಎಂದು ಯೇಸು ಹೇಳುವದನ್ನು ಕೇಳಿಸಿಕೊಳ್ಳುವದಕ್ಕಾಗಿ ನನ್ನ ಸ್ವಯಂ ಸೇವೆ ಮಾಡುತ್ತ ನಾನು ಮಾಡಬೇಕಾದದ್ದನ್ನು ಹೇಳಿಕೊಳ್ಳದೇ ಮಾಡುವೆನು.

ಇದಲ್ಲದೆ, ನನ್ನ ಪ್ರಯತ್ನಗಳಲ್ಲಿ ಹೆಚ್ಚು ಸ್ಥಿರನಾಗಿರಲು ಪ್ರಯತ್ನಿಸುವೆನು. ಕೆಲವು ಸಲ ಕರ್ತನ ಸೇವೆಯಲ್ಲಿ "ಬೆಚ್ಚಗಿನ" ಮತ್ತು "ತಣ್ಣಗಿನ" ಸ್ಥಿತಿಯಲ್ಲಿ ಇರುವದರ ಮಧ್ಯದಲ್ಲಿ ಅಲ್ಲಾಡುವೆನು. ಆದಿ ಕ್ರೈಸ್ತರು "ತಮ್ಮನ್ನು ನಿರಂತರವಾಗಿ ಸಮರ್ಪಿಸಿಕೊಂಡಿದ್ದರು" ಎಂದು ಓದುತ್ತೇವೆ (ಅಪೊಸ್ತಲರ ಕೃತ್ಯಗಳು 2:42). "ಸ್ಥಿರಚಿತ್ತರಾಗಿಯೂ, ನಿಶ್ಚಲರಾಗಿಯೂ ... ಕರ್ತನ ಕೆಲಸವನ್ನು ಯಾವಾಗಲೂ ಅತ್ಯಾಸಕ್ತಿಯಿಂದ ಮಾಡುವವರಾಗಿರಿ" ಎಂದು ಪೌಲನು ಹೇಳಿದನು (1 ಕೊರಿಂಥ 15:58). ಯೇಸುವು ತಾನೇ ತನ್ನ ಅನುಯಾಯಿಗಳಲ್ಲಿ ಉಗುರು ಬೆಚ್ಚಗಿನ ಸ್ಥಿತಿಯನ್ನು ದ್ವೇಷಿಸುವೆನು ಎಂದು ಹೇಳಿದ್ದಾನೆ (ಪ್ರಕಟನೆ 3:16) ನನ್ನ ಕೊನೆಯ ವರ್ಷದಲ್ಲಿ, ಯಾವಾಗಲೂ ಕರ್ತನ ಕಾರ್ಯಕ್ಕಾಗಿ "ಬೆಚ್ಚಗಿರಲು" ಬಯಸುವೆನು ಯಾರೋ ಒಬ್ಬರು ಹೀಗೆ ಬರೆದಿದ್ದಾರೆ:

> ಒಂದೇ ಒಂದು ಜೀವನ,
> ಅದು ಬೇಗನೇ ದಾಟಿ ಹೋಗುವುದು:
> ಕ್ರಿಸ್ತನಿಗಾಗಿ ಮಾಡಿದ್ದು ಮಾತ್ರವೇ
> ನಿಲ್ಲುವುದು ಸದಾಕಾಲ.[10]

ಆತ್ಮಿಕವಾಗಿ ಬೆಳೆಯುವದಕ್ಕಾಗಿ ಎರಡನೆಯ ಮಾರ್ಗವು ಸ್ವಭಾವದಲ್ಲಿ ಹೆಚ್ಚು ವೈಯಕ್ತಿಕವಾದದ್ದಾಗಿರುವುದು. ನನ್ನ ಬೈಬಲನ್ನು ನಾನು ಕ್ರಮವಾಗಿ ಓದುವೆನು. ಹಾಗೆ ಮಾಡುವಲ್ಲಿ ತಪ್ಪಿದ್ದಕ್ಕಾಗಿ, "ನಾನು ಬಹಳ ಆಯಾಸಗೊಂಡಿದ್ದೆನು" ಇಲ್ಲವೇ "ನನಗೆ ಸಮಯವೇ ಸಿಗುವದಿಲ್ಲ" ಎಂಬ ನೆವಗಳಿರುವದಿಲ್ಲ. ನಾನು ಪ್ರಾಮಾಣಿಕನಾಗಿದ್ದರೆ, ಈಗ ನಾನು ದೇವರ ವಾಕ್ಯಕ್ಕಿಂತ ಹೆಚ್ಚಾಗಿ, ವೃತ್ತಪತ್ರಿಕೆಗಳೊಂದಿಗೆ ಮತ್ತು ದೂರದರ್ಶನದೊಂದಿಗೆ ಹೆಚ್ಚು ಸಮಯ ಕಳಿಯುತ್ತಿದ್ದೇನೆಂದು ಒಪ್ಪಿಕೊಳ್ಳತಕ್ಕದ್ದು. ಪ್ರಾಪಂಚಿಕ ಸಂಗತಿಗಳು ತಮ್ಮ ಆಕರ್ಷಣೆಯನ್ನು ಕಳೆದುಕೊಳ್ಳುತ್ತಿರುವಂತೆ - ನಿತ್ಯತ್ವದ ಬಗ್ಗೆ ಮಾತಾಡುವ ಬೈಬಲಿನ ಕಡೆಗೆ ಹೆಚ್ಚು ಹೆಚ್ಚು ತಿರುಗುವುದು ಸ್ವಾಭಾವಿಕವಾಗಿದೆ. ನಾನು ನನ್ನ ಅಧ್ಯಯನದಲ್ಲಿ "ಜಾಗರೂಕತೆಯುಳ್ಳವನಾಗಿರಲು" ಬಯಸುವೆನು. ಅದರಿಂದ ಅವಮಾನಕ್ಕೆ ಗುರಿಯಾಗದ ಮತ್ತು ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿ ಸುವ ಕೆಲಸದವನಂತೆ ದೇವರಿಂದ ಮನ್ನಣೆ ಹೊಂದುವೆನು (2 ತಿಮೊಥೆ 2:15). ವಾಕ್ಯದಿಂದ ನಂಬಿಕೆಯು ಬರುತ್ತದೆಂದು ಬೈಬಲ್ ಹೇಳುತ್ತದೆ (ರೋಮಾಪುರ 10:17).

ನನ್ನ ವಿಶ್ವಾಸವು ಬೆಳೆದಂತೆ ಮತ್ತು ನೂತನ ಸಮಾಧಾನ ಮತ್ತು ಭದ್ರತೆಯನ್ನು ಹೊಂದಿಕೊಂಡಂತೆ, ಮೊದಲು ನನ್ನ ಕಾರ್ಯಕ್ರಮವು ಕ್ರಮಪ್ರಕಾರವಾದ ಬೈಬಲ್ ಅಧ್ಯಯನವನ್ನು ಒಳಗೊಂಡಿರಲಿಲ್ಲವೆಂದು ದುಃಖಪಡುತ್ತೇನೆ.

ಅಂತಿಮವಾಗಿ, ದೇವರನ್ನು ನಾನು ಬೇಗನೇ ಮುಖಾಮುಖಿಯಾಗಿ ನೋಡುವದರಿಂದ, ಆತನೊಂದಿಗೆ ಸತತವಾಗಿ ಸಂಪರ್ಕಿಸಲು ಬಯಸುತ್ತೇನೆ, ಹೇಗೆಂದು ಪೌಲನು ಹೇಳುತ್ತಾನೆ: "ಎಡಬಿಡದೆ ಪ್ರಾರ್ಥನೆ ಮಾಡಿರಿ" (1 ಥೆಸಲೊನೀಕ 5:17). ಹಿಂದಿನ ಸಮಯದಲ್ಲಿ, ನನ್ನ ಆಶೀರ್ವಾದಗಳಿಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುವದನ್ನು, ತೀರ್ಮಾನಗಳನ್ನು ಮಾಡುವಲ್ಲಿ ಜ್ಞಾನಕ್ಕಾಗಿ ದೇವರನ್ನು ಕೇಳುವದನ್ನು, ಮತ್ತು ಕ್ಷಮಾಪಣೆಗಾಗಿ ಆತನ ಕ್ಷಮಾಪಣೆಯನ್ನು ಬೇಡಿಕೊಳ್ಳುವದನ್ನು ನಾನು ಕಡೆಗಣಿಸಿರಬಹುದು. ನನ್ನ ಉಳಿದಿರುವ ಮಿತಿಯುಳ್ಳ ಸಮಯದಲ್ಲಿ, ಆತನೊಂದಿಗೆ ಮಾತಾಡುತ್ತ ತಾಸುಗಳನ್ನು ಕಳೆಯುವನು. ಹಿಂದಿನ ಸಮಯದಲ್ಲಿ ಎರಡು ನಿಮಿಷಗಳ ಪ್ರಾರ್ಥನೆಯು ನನ್ನ ಆತ್ಮಿಕತೆಯನ್ನು ತುಂಬಿದ್ದಿರಬಹುದು. ಆದರೆ ಈಗ ಒಂದು ತಾಸೂ ಸಹ ನನ್ನ ಎಲ್ಲಾ ವಿಚಾರಗಳನ್ನು ನನ್ನ ಮನಸ್ಸು ತುಂಬಿಕೊಂಡಿರುವದಿಲ್ಲ.

ಹೌದು, ನನಗೆ ಜೀವಿಸಲು ಒಂದು ವರ್ಷ ಮಾತ್ರ ಇದ್ದರೆ, ಪರಲೋಕ ಎಂದು ಕರೆಯಲ್ಪಡುವ ಆ ಸಿದ್ಧವಾಗಿದ್ದ ಸ್ಥಳಕ್ಕಾಗಿ ನಾನು ಸಿದ್ಧನಾಗಿರುವಂತೆ ನಮ್ಮ ಆತ್ಮಿಕತೆಯನ್ನು ಬೆಳಸಿಕೊಳ್ಳಲು ಪ್ರಯತ್ನಿಸುವೆನು (ಯೋಹಾನ 14:3).

## ಮುಕ್ತಾಯ

"ನನಗೆ ಜೀವಿಸಲು ಒಂದೇ ವರ್ಷವಿದ್ದರೆ ಏನಾಗುವುದು?" ಎಂಬ ಪ್ರಶ್ನೆಯನ್ನು ನಾನು ಯೋಚಿಸುವಾಗ ನಾನು ತಲುಪಿದ ಕೆಲವೇ ತೀರ್ಮಾನಗಳು ಅವಾಗಿವೆ. ಈ ಪ್ರಶ್ನೆಯನ್ನು ಜವಾಬ್ದಾರಿಕೆಯಿಂದ ಯೋಚಿಸುವುದು, ಯಾವುದೇ ವ್ಯಕ್ತಿಯ ಜೀವನದಲ್ಲಿ ಭಿನ್ನತೆಯನ್ನು ಮಾಡುವುದು.

ಪ್ರತಿಯೊಂದು ವರ್ಷವನ್ನು ಇಲ್ಲವೇ ತಿಂಗಳನ್ನು ಇಲ್ಲವೇ ವಾರವನ್ನು ಇಲ್ಲವೇ ದಿನವನ್ನು ಭೂಲೋಕದಲ್ಲಿ ಅದು ನಮ್ಮ ಕೊನೆಯದೆಂಬಂತೆ ನಾವು ಜೀವಿಸಬೇಕು. ಜಾನ್ ವೆಸ್ಲಿಯವರು, ದಿನವು ಭೂಲೋಕದಲ್ಲಿ ಅವರ ಕೊನೆಯ ದಿನವೆಂದು ಅವರಿಗೆ ತಿಳಿದರೆ ಅದನ್ನು ಹೇಗೆ ಕಳೆಯಬಹುದು ಎಂದು ಕೇಳಲ್ಪಟ್ಟರು. ಆಗ ಅವರು ಹೀಗೆ ಉತ್ತರಿಸಿದರು: "ಯಾಕೆ, ಅದನ್ನು ಈಗ ಉದ್ದೇಶಿಸಿದಂತೆ ಕಳೆಯುವೆನು. ಈ ಸಾಯಂಕಾಲ ಗ್ಲೌಸೆಸ್ಟರದಲ್ಲಿ ಮತ್ತು ನಾಳೆ ಬೆಳಿಗ್ಗೆ ಪುನಃ 5 ಗಂಟೆಗೆ ಪ್ರಸಂಗಿಸತಕ್ಕದ್ದು … ಆ ಮೇಲೆ ಮಾರ್ಟಿನ್ ಹೌಸಿಗೆ ದುರಸ್ತಿ, ಕುಟುಂಬದೊಂದಿಗೆ ಮಾತಾಡುವುದು ಹಾಗೂ ಪ್ರಾರ್ಥಿಸುವುದು, ಯಥಾಪ್ರಕಾರವಾಗಿ ಹತ್ತು ಗಂಟೆಗೆ ನನ್ನ ಕೋಣೆಯೊಳಗೆ ಹೋಗುವುದು, ನನ್ನ ಪರಲೋಕದ ತಂದೆಗೆ ನನ್ನನ್ನು ಒಪ್ಪಿಸುವುದು, ಮಲಗುವುದು ಮತ್ತು ಮಹಿಮೆಯಲ್ಲಿ ಏಳುವುದು (ನಿರೀಕ್ಷಿಸುವುದು)."[11] ಅವನು ಪ್ರತಿಯೊಂದು ದಿನ ಜೀವಿಸದಂತೆ ತನ್ನ ಭೂಲೋಕದ ಕೊನೆಯ ದಿನವೂ ಜೀವಿಸುವನೆಂದು ಅವನು ಹೇಳಿದನು. ನಾವು ಯಾವಾಗಲೂ ಸಾಯುವದಕ್ಕೆ ಸಿದ್ಧರಾಗಿರಬೇಕು; ಯಾಕಂದರೆ ನಾವು ಸಾಯಲು ಸಿದ್ಧರಾಗಿದ್ದರೆ, ನಾವು ಜೀವಿಸುವದಕ್ಕೆ ಸಿದ್ಧರಾಗಿರುವದಿಲ್ಲ.

*ನಿಮಗೆ* ಜೀವಿಸಲು ಒಂದೇ ವರ್ಷವಿದ್ದರೆ ಏನಾಗುತ್ತದೆ? ನೀವು ಸಿದ್ಧರಾಗಿರುವಿರೋ? ಪಾಪಗಳ ಪರಿಹಾರಕ್ಕಾಗಿ ಬಾಪ್ತಿಸ್ಮ ಹೊಂದಿರುವಿರೋ (ಅಪೊಸ್ತಲರ ಕೃತ್ಯಗಳು 2:38)? ನೀವು ಕ್ರೈಸ್ತರಾಗಿದ್ದರೆ, ನೀವು ನಂಬಿಗಸ್ತರಾಗಿರುವಿರೋ (ಪ್ರಕಟನೆ 2:10)? ನೀವು ಕರ್ತನಿಗೆ ವಿಧೇಯರಾಗುವ ಅವಶ್ಯಕತೆ ಇದ್ದರೆ, ಅದನ್ನು ಈಗಲೇ ಮಾಡಿರಿ!

ಟಿಪ್ಪಣೆಗಳು

[1]ನೀವು ಈ ಪಾಠವನ್ನು ಉಪಯೋಗಿಸುವಾಗಲೆಲ್ಲಾ, ಆಗಿನ ವರ್ಷವನ್ನು ಸೇರಿಸಿರಿ. ಈ ಪ್ರಸಂಗದ ಮೊದಲಿನ ಅವೃತ್ತಿಯು The Day Christ Came (Again) and Other Sermons (Dallas: Christian Publishing Co., 1965), 198-210ದಲ್ಲಿ ಪ್ರಕಟವಾಗುತ್ತಿತ್ತು. [2]Poor Richard's Almanac (June 1746), quoted in John Bartlett, Familiar Quotations, 16th ed., gen. ed. Justin Kaplan (Boston: Little, Brown and Co., 1992), 310. [3]KJVಯಲ್ಲಿ "ಸಮಯವನ್ನು ಬಿಡಿಸಿಕೊಳ್ಳಿ" ಎಂದಿದೆ ಮೂಲ ಪಾಠವನ್ನು "ಅವಕಾಶವನ್ನು ಕೊಂಡುಕೊಳ್ಳುವುದು" ಎಂದು ಭಾಷಾಂತರಿಸಬಹುದು. [4]Author unknown. [5]"ಪಾಪ" ಎಂಬ ಪದದ ಮೂಲವಾಗಿ "ಗುರಿ ತಪ್ಪಿಸಿಕೊಳ್ಳುವುದು" ಎಂದರ್ಥ ಕೊಡುತ್ತದೆ. [6]ಬಾಪ್ತಿಸ್ಮವು ನೀರಿನಲ್ಲಿ ಮುಳುಗೇಳಿಸುವುದಾಗಿದೆ. [7]ನಿಮ್ಮ ಮಕ್ಕಳ ತರಬೇತಿಗಾಗಿ ನಿಮ್ಮ ಪ್ರದೇಶದಲ್ಲಿ ಇರುವ ಅವಕಾಶಗಳನ್ನು ನಮೂದಿಸಿರಿ. ಜಗತ್ತಿನ ನನ್ನ ಭಾಗದಲ್ಲಿ ಬೇಸಿಗೆ ಕಾಲದಲ್ಲಿ ಬೈಬಲ್ ಕ್ಯಾಂಪಗಳೂ ವಿಶೇಷ ತರಬೇತಿ ಕಾರ್ಯ ಕ್ರಮಗಳೂ ಇರುವವು. [8]ಈ ಅವಕಾಶವು ಪ್ರತಿಯೊಂದು ಕಡೆಯಲ್ಲಿ ಲಭ್ಯವಿರುವದಿಲ್ಲ, ಆದರೆ ಅದು ಲಭ್ಯವಿರುವ ಕ್ಷೇತ್ರಗಳಿಗಾಗಿ ಅದನ್ನು ಒತ್ತಿಹೇಳಲು ಬಯಸಿದೆನು. [9]ಉದಾಹರಣೆಯಾಗಿ,ಒಬ್ಬ ವ್ಯಕ್ತಿಯು ತನ್ನ ಮೃತ್ಯು ಪತ್ರದಲ್ಲಿ ಸ್ಥಳಿಕ ಸಭೆಯನ್ನ ಕೂಡಿಸಬಹುದು. ಟ್ರೂತ್ ಫಾರ್ ಟುಡೆ ವರ್ಲ್ಡ್ ಮಿಶನ್ ಸ್ಕೂಲಿನಂತೆ ಒಳ್ಳೆ ಕಾರ್ಯಗಳನ್ನು ಕೂಡಿಸಬಹುದು. [10]Author unknown.

[11]Quoted in Archibald Naismith, 2,400 Outlines, Notes, Quotes and Anecdotes for Sermons (Grand Rapids, Mich.: Baker Book House, 1975), 234.

© 2009 Truth for Today